Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 2/2014

ಫ್ರಾ.ಸಾ. 7 ಚಾ.ಸಾ. 14

| | | |
|---|---|---|
| ಹೆಸರು | : | ರಾಘವೇಂದ್ರರಾವ |
| ತಂದೆಯ ಹೆಸರು | : | ಭೀಮಶೇನರಾವ ಪಟವಾರಿ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಎಸ್.ಡಿ.ಎ. ಜಿಲ್ಲಾಧಿಕಾರಿ ಕಛೇರಿ ಯಾದಗಿರಿ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 14-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2008 ರಿಂದ 2017ರ ವರೆಗೆ ಯಾದಗಿರ ಸಹಾಯಕ ಆಯುಕ್ತರವರ ಕಛೇರಿಯಲ್ಲಿ ಬೆರಳಚ್ಚುಗಾರ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 15.11.2012 ರಂದು ಬೆಳಿಗ್ಗೆ 11-00 ಗಂಟೆಗೆ ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಲೋಕಾಯುಕ್ತ ಠಾಣೆಗೆ ಹಾಜರಾಗಿರುತ್ತೇನೆ. ಅಲ್ಲಿ ಜಗದೀಶ ಹಂಚನಾಳ ಪಿಐ ರವರು ಇದ್ದರು. ನನ್ನ ಜೊತೆ ಆರ್.ಐ. ಅಣವೀರಪ್ಪ ಸಹ ಹಾಜರಾಗಿದ್ದರು. ಫಿರ್ಯಾದಿಯವರು 2010 ರಲ್ಲಿ ಜಮೀನಿನ ಎನ್.ಎ. ಬಗ್ಗೆ ಅರ್ಜಿ ಸಲ್ಲಿಸಿದ್ದು ಆ ಜಮೀನಿನ ಸರ್ವೆ ನಂ. 46/1/2, 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಎನ್.ಎ. ಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿದ್ದರು. ಸ್ಥಳ ಪರಿಶೀಲನೆಗಾಗಿ ಎ.ಸಿ. ಅವರಿಗೆ ಡಿ.ಸಿ. ಅವರು ಆದೇಶ ಮಾಡಿದ್ದರು. ಎ.ಸಿ. ಕಛೇರಿಯ ಮ್ಯಾನೇಜರ ಗುರುಪಾದ ಪಾಟೀಲ ಅವರು ಮತ್ತು ಸಿದ್ದಯ್ಯ ಸ್ವಾಮಿ ವಿ.ಎ. ಅವರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ 30,000/- ರೂ ಲಂಚಕ್ಕಾಗಿ ಬೇಡಿಕೆ ಇಟ್ಟಿರುವದಾಗಿ ಹೇಳಿದರು. ಈ ಮಾತುಕತೆಯನ್ನು ಲೋಕಾಯುಕ್ತ ಠಾಣೆಯಿಂದ ಕೊಟ್ಟ ವೈಸ ರೆಕಾರ್ಡನಲ್ಲಿ ದಾಖಲು ಮಾಡಿಕೊಂಡು ತಂದು ಹಾಜರಪಡಿಸಿದ್ದರು. ಸಿದ್ದಯ್ಯ ಸ್ವಾಮಿ ಅವರು 30,000/- ರೂ ಬದಲಾಗಿ 25,000/- ರೂ ಕೊಡಬೇಕು ಎಂದು ಬೇಡಿಕೆ ಇಟ್ಟ ಬಗ್ಗೆ ನಾನು ಮತ್ತು ಅಣವೀರಪ್ಪ ಗುರುತಿಸಿದೆವು. ಎರಡನೇ ವೈಸ ರೆಕಾರ್ಡನಲ್ಲಿ ಆ ಜಮೀನಿನಲ್ಲಿ 2 ಕಂಬಗಳು ಇದ್ದು ಅದನ್ನು ತೆಗೆದ ನಂತರ ಪರಿಶೀಲನೆಗೆ ಒಳಪಡಿಸುವಂತೆ ಹೇಳಿದ್ದರು. ಇಲ್ಲದಿದ್ದರೆ ಅದು ಬಾಕಿ

ಉಳಿಯುತ್ತದೆ ಎಂದು ಹೇಳಿದ ಸಂಭಾಷಣೆ ಇತ್ತು. ಆ ಧ್ವನಿ 1ನೇ ಆರೋಪಿ ಗುರುಪಾದಪ್ಪನ ಧ್ವನಿಯಾಗಿದೆ. ಮೂರನೇ ವೈಸ ರೆಕಾರ್ಡನಲ್ಲಿ ಇನ್ನು ಕಡತವನ್ನು ಜಿಲ್ಲಾಧಿಕಾರಿ ಕಛೇರಿಯಿಂದ ತೆಗೆದುಕೊಂಡು ಹೋಗಿಲ್ಲ ಮತ್ತು ನೋಡಿಲ್ಲ ಅದನ್ನು ನೋಡಿದ ನಂತರ ಮುಂದೆ ಹೇಳುತ್ತೇನೆ ಎಂದು ಫಿರ್ಯಾದಿಗೆ ಹೇಳಿದ ಬಗ್ಗೆ ಮಾತುಕತೆ ಇತ್ತು. ಅದನ್ನು ನಾನು ಮತ್ತು ಅಣವೀರಪ್ಪ ಕೇಳಿಸಿಕೊಂಡು ಧ್ವನಿ ಗುರುತಿಸಿದೇವು. ಇದನ್ನು ಕಂಪ್ಯೂಟರನಿಂದ ಗುತ್ತಪ್ಪ ಅವರು ಒಟ್ಟು 3 ಸಿ.ಡಿ. ಮಾಡಿ ಅವುಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಂಡರು. ದಿಃ 15.11.2012 ರಂದು ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 2-30 ಗಂಟೆಯ ವರೆಗೆ ಲೋಕಾಯುಕ್ತ ಕಛೇರಿಯಲ್ಲಿ ಈ ಪ್ರಕ್ರಿಯೇ ನಡೆಯಿತು. ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಿ.ಡಿ. ಗಳು ಮು.ಮಾ.1 ರಿಂದ 3 ಎಂದು ಗುರುತಿಸಲಾಗಿದೆ. ಈ ಬಗ್ಗೆ ಧ್ವನಿಗುರುತಿಸುವ ಪಂಚನಾಮೆ ನಿ.ಪಿ.30 ಆಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.30(ಸಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ</u>

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.